

ಹಾವಿನ ಚಲನೆಯ ಬಗ್ಗೆ, ತೋಟದಲ್ಲಿನ ಅಳಿಲುಗಳ ಆಹಾರದ ಬಗ್ಗೆ, ಅರಳಿಕಟ್ಟೆಯ ಬಳಿ ಕೂರುತ್ತಿದ್ದ ಮನುಷ್ಯರು ಮಾಡುವ ತಮಾಷೆ, ಮಕ್ಕಳ ಆಟಗಳ ಬಗ್ಗೆ, ಆಗ ಅವರು ಕೀಟಲೆ-ಕಿತ್ತಾಟ ನಂತರ ಬೇಗನೆ ಮುನಿಸು ಮರೆತು ಒಂದಾಗುತ್ತಿದ್ದ ಬಗ್ಗೆ ಕಥೆಗಳನ್ನು ಹಂಚಿಕೊಳ್ಳುತ್ತಿದ್ದರು.

ಕ್ರೀಟಾ ಇಂಟರ್ನೆಟ್‌ನಲ್ಲಿ ನೋಡಿದ ವಿಷಯಗಳು, ವಿಶೇಷ ಸ್ಥಳಗಳನ್ನು ಗೆಳೆಯರಿಗೆ ತೋರಿಸುತ್ತಾ, ಅವುಗಳ ವೈಶಿಷ್ಟ್ಯ ಮತ್ತು ಆ ಸ್ಥಳಗಳ ಬಗ್ಗೆ ಇರುವ ಪುರಾಣ ಕಥೆಗಳನ್ನು ವಿವರಿಸುತ್ತಿತ್ತು. ಒಮ್ಮೊಮ್ಮೆ, ಕೆಲವೇ ಕ್ಷಣಗಳಲ್ಲಿ ಚಿತ್ರವನ್ನು ಬಿಡಿಸಿ ಅವರನ್ನು ನಿಬ್ಬೆರಗಾಗುವಂತೆ ಮಾಡುತ್ತಿತ್ತು. ಅಷ್ಟೇ ಅಲ್ಲ, ಸನ್ನಿ ಮತ್ತು ಬ್ರಿಜಿಯನ್ನು ವಕ್ರ ವಕ್ರವಾಗಿಯೋ, ಡೊಳ್ಳು ಹೊಟ್ಟೆ ಇರುವಂತೆಯೂ ಬಿಡಿಸಿ ನಗುತ್ತಿತ್ತು. ಸನ್ನಿ ಮತ್ತು ಬ್ರೀಜಿಯು ಇದರಿಂದ ಸಿಟ್ಟಾಗುತ್ತಿರಲಿಲ್ಲ. ಬದಲಾಗಿ ಆನಂದಿಸುತ್ತಿದ್ದರು.

ತಮ್ಮ ಅನುಭವಗಳನ್ನು ಕಲೆ ಹಾಕಿ ಮೂವರು ಮಿತ್ರರು ಹಂಚಿಕೊಳ್ಳುವುದೇ ಒಂದು ಹಿತಕರ ಅನುಭವವಾಗಿತ್ತು ಅವರಿಗೆ. ಅವರು ಲೆಕ್ಕವಿಲ್ಲದಷ್ಟು ವಿಷಯಗಳನ್ನು ಹಂಚಿಕೊಳ್ಳುತ್ತಿದ್ದರು ಮತ್ತು ತಮ್ಮಂತೆ ಇರಲು ಸಾಧ್ಯವಾಗದ ಮನುಷ್ಯರ ಕುರಿತು ಮಾತನಾಡಿಕೊಂಡು ನಗುತ್ತಿದ್ದರು. ●